## ದಿನಾಂಕ : 07-11-2020 ರಂದು ಬೆಳಗ್ಗೆ 10.30 ಗಂಟೆಗೆ ವಾರ್ಡ್-113ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-113 ಕೋನೇನ ಅಗ್ರಹಾರ ವಾರ್ಡ್ ಕಛೇರಿಯಲ್ಲಿ ದಿನಾಂಕ : 07.11.2020 ರಂದು ಬೆಳಿಗ್ಗೆ 10.30 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ.ಎಂ.ಜಿ.ಹೆಗ್ಡೆ – ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-113.
2. ಶ್ರೀ.ವಿ.ಸಾಮಂದಯ್ಯ – ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ.
3. ಶ್ರೀ.ಪ್ರವೀಣ ಎನ್ ಎಮ್ – ಆರೋಗ್ಯ ನೀರಿಕ್ಷಕರು
4. ಶ್ರೀ.ಟಿ.ಎಸ್.ನಾಗಪ್ಪ – ಎಇಇ, ಬೆಸ್ಕಾಂ
5. ಶ್ರೀ.ಗೋವಿಂದೇಗೌಡ – ತೋಟಗಾರಿಕಾ ನಿರೀಕ್ಷಕರು
6. ಶ್ರೀ.ಕಾಂತರಾಜ್.ಆರ್ – ಲ್ಯಾಬ್ ಟೆಕ್ನಿಶಿಯನ್
7. ಶ್ರೀ.ಜಿ.ಮಂಜುನಾಥ್ – ಎಎಸ್‌ಐ, ಸಂಚಾರಿ ಪೊಲೀಸ್
8. ಶ್ರೀ.ಆರ್.ರಾಜೇಂದ್ರ – ಸ.ಕಂ.ಅ, ಜೀವನ್‌ಭೀಮಾನಗರ
9. ಶ್ರೀಮತಿ.ವಿದ್ಯಾ.ಸಿ.ಹೆಚ್ – ಪಿಎಸ್‌ಐ, ಕಾನೂನು ಸುವ್ಯವಸ್ಥೆ,
10. ಶ್ರೀ.ಲೋಹಿತ್‌ಕೆ – ಬಿಡಬ್ಲ್ಯೂಎಸ್‌ಎಸ್‌ಬಿ
11. ಶ್ರೀಮತಿ.ಪೂರ್ಣಿಮಾ ಶೆಟ್ಟಿ – ಸದಸ್ಯರು
12. ಶ್ರೀ.ಏಕಾಂಬರೀಶ್ ರೆಡ್ಡಿ – ಸದಸ್ಯರು
13. ಶ್ರೀಮತಿ.ಪೂರ್ಣಿಮಾ ಕಾರ್ತಿಕ್ – ಸದಸ್ಯರು
14. ಶ್ರೀ.ವಿ.ಚಂದ್ರಶೇಖರ್ ರೆಡ್ಡಿ – ಸದಸ್ಯರು
15. ಶ್ರೀ.ಅರವಿಂದ್ – ಸದಸ್ಯರು
16. ಶ್ರೀ.ಮುರಳಿಮೋಹನ್ – ಸದಸ್ಯರು
17. ಶ್ರೀ.ಕೆ.ಫಯಾಜ್ ಅಹ್ಮದ್ – ಸದಸ್ಯರು
18. ಶ್ರೀ.ಪದ್ಮನಾಭ್.ಎಸ್.ಆರ್ – ಸದಸ್ಯರು
19. ಶ್ರೀ.ಹೇಮಂತ್ – ಸದಸ್ಯರು
20. ಶ್ರೀ.ಅರವಿಂದ್‌ಕುಮಾರ್.ಸಿ – ಸದಸ್ಯರು
21. ಶ್ರೀ.ಎಸ್.ಜೈಕುಮಾರ್ – ಸದಸ್ಯರು
22. ಶ್ರೀ.ಮಹಮ್ಮದ್ ಷರೀಪ್ – ಸದಸ್ಯರು
23. ಶ್ರೀ.ಜಿ.ಮೂರ್ತಿ – ಸದಸ್ಯರು

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ವಿ.ಸಾಮಂದಯ್ಯರವರು ಸಭೆಗೆ ಆಗಮಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ನಂತರದಲ್ಲಿ ಹಿಂದಿನ ಸಭೆಯ ನಡವಳಿಗಳನ್ನು ಓದಿ ತಿಳಿಸಲಾಯಿತು ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು. ಹಾಗೂ ವಾರ್ಡ್ ಸಮತಿಗೆ ಆಯ್ಕೆ ಮಾಡಲಾಗಿರುವ ಸದಸ್ಯರುಗಳ ಪಟ್ಟಿಯನ್ನು ಸಭೆಗೆ ತಿಳಿಸಿದರು.

- ಸಭೆಯು ಪ್ರಾರಂಭವಾದ ನಂತರ ಯುನಿಯನ್ ಬ್ಯಾಂಕ್ ಆಫ್ ಇಂಡಿಯಾದ ಹಲವು ಬ್ಯಾಂಕ್ ಅಧಿಕಾರಿಗಳು ಸಭೆಗೆ ಆಗಮಿಸಿ ಕೋವಿಡ್ –19 ರೋಗದ ವಿಷಯವಾಗಿ ಆರೋಗ್ಯ ವಿಮೆ ಮಾಡಿಸಿದ್ದ ಪಕ್ಷದಲ್ಲಿ ರೋಗಿಗಳಿಗೆ ಆರ್ಥಿಕವಾಗಿ ಯಾವ ರೀತಿ ಅನುಕೂಲವಾಗುತ್ತದೆ ಎಂಬ ಬಗ್ಗೆ ವಿವರಣೆಯನ್ನು ನೀಡಿ, ಈ ಬಗ್ಗೆ ಅಂದರೆ ಕೋವಿಡ್–19 ರ ಹೆಲ್ತ್ ಇನ್ಶೂರೆನ್ಸ್ (ಆರೋಗ್ಯ ವಿಮೆ) ಮಾಡಿಸುವ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸಭೆಯಲ್ಲಿ ತಿಳಿಸಿದರು.
- ನಂತರ ಡಾ.ದರ್ಶನ್‌ರವರು ಮಾತನಾಡಿ, ಕೋವಿಡ್–19 ಬಗ್ಗೆ ಕೋವಿಡ್ ಪರೀಕ್ಷೆಗಳನ್ನು ಮಾಡಿಸಿಕೊಳ್ಳುವುದು, ಮಾಸ್ಕನ್ನು ಕಡ್ಡಾಯವಾಗಿ ಧರಿಸುವುದು, ಸಾಮಾಜಿಕ ಅಂತರವನ್ನು ಪಾಲನೆ ಮಾಡುವುದು, ಕೋವಿಡ್ ಪಾಸಿಟಿವ್ ಆದ ವ್ಯಕ್ತಿಯು ಪ್ರತ್ಯೇಕವಾಗಿ ಇದ್ದು, ರೋಗವು ಇತರರಿಗೆ ಹರಡದಂತೆ ಎಚ್ಚರಿಕೆ ವಹಿಸುವುದು ಎಂದು ತಿಳಿಸಿದರು ಮತ್ತು ನೋಡಲ್ ಅಧಿಕಾರಿಯವರಾದ ಶ್ರೀ.ಕಾಂತ್‌ರಾಜ್‌ರವರು ಸಹ ಮೇಲ್ಕಂಡ ವಿಷಯಗಳ ಬಗ್ಗೆ ಸಭೆಯಲ್ಲಿ ವಿವರಿಸಿದರು.
- ಶ್ರೀ.ಯಾದವ್‌ರವರು ಮಾತನಾಡಿ, ಪ್ರಾಥಮಿಕ ಆರೋಗ್ಯ ಕೇಂದ್ರದ ಸುತ್ತಮುತ್ತಲು ಹೆಚ್ಚಾಗಿ ಗಿಡಗಂಟೆಗಳು ಬೆಳೆದಿದ್ದು, ಇದರಿಂದ ಹಾವುಗಳು ಪ್ರಾಥಮಿಕ ಆರೋಗ್ಯ ಕೇಂದ್ರದ ಒಳಗೆ ಬಂದಿರುವ ಕಾರಣ ಸದರಿ ಗಿಡಗಂಟೆಗಳನ್ನು ತೆರವುಗೊಳಿಸುವಂತೆ ಸಭೆಗೆ ತಿಳಿಸಿದರು. ಈ ವಿಷಯವಾಗಿ ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.
- ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ.ಪ್ರವೀಣ್‌ರವರು ವಾರ್ಡ್‌ಗೆ ಈಗಾಗಲೇ ಇರುವ ಪೌರಕಾರ್ಮಿಕರೊಂದಿಗೆ ಹೆಚ್ಚುವರಿಯಾಗಿ 10 ಜನ ಪೌರಕಾರ್ಮಿಕರುಗಳನ್ನು ಒದಗಿಸಿಕೊಂಡು ಸ್ವಚ್ಛತಾ ಕಾರ್ಯಗಳನ್ನು ಮಾಡಲಾಗುತ್ತದೆ ಎಂದು ಸಭೆಗೆ ತಿಳಿಸಿದರು. ಹಾಗೂ ಸೊಳ್ಳೆ ನಿಯಂತ್ರಣ ಔಷದ ಸಿಂಪಡಣೆಯನ್ನು ಸಹ ಮಾಡಲಾಗುವುದು ಎಂದು ತಿಳಿಸಿದರು.
- ಪಿಎಸ್‌ಐರವರಾದ ಶ್ರೀಮತಿ.ವಿದ್ಯಾರವರು ಕಾನೂನು ಸುವ್ಯವಸ್ಥೆ ಬಗ್ಗೆ ಮಾತನಾಡಿ, ವಿನಾಯಕನಗರದಲ್ಲಿ ಸರಗಳ್ಳತನ ಆದ ಸಮಯದಲ್ಲಿ ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ ವಿಚಾರಣೆ ನಡೆಸಲಾಗಿದೆ ಎಂದು ಸಭೆಗೆ ತಿಳಿಸಿದರು. ಸದಸ್ಯರು ಮಾತನಾಡಿ ಜೂಜಾಟ, ಇನ್ನಿತರೆ ಅನ್ಯೆತಿಕ ಚಟುವಟಿಕೆಗಳನ್ನು ನಿಯಂತ್ರಿಸಲು ಬೀಟ್ ಪೋಲೀಸ್‌ರವರನ್ನು ನಿಯೋಜಿಸಬೇಕೆಂದು ಕೋರಿದರು.
- ಶ್ರೀಮತಿ.ಪೂರ್ಣಿಮಾ ಶೆಟ್ಟಿ ಮತ್ತು ಶ್ರೀ.ಷರೀಫ್‌ರವರು ಮಾತನಾಡಿ, ಕನಿಷ್ಠ ಪಕ್ಷ ದಿನದಲ್ಲಿ ಮೂರು ಬಾರಿ ಸೈರನ್ ಹಾಕಿಕೊಂಡು ಪೋಲೀಸ್ ವಾಹನದಲ್ಲಿ ಪ್ಯಾಟ್ರೋಲಿಂಗ್ ನಡೆಸುವಂತೆ ಕೋರಿದರು.
- ಶ್ರೀ.ಜಯಕುಮಾರ್‌ರವರು ಮಾತನಾಡಿ, ಬಿಡಿಎ ಲೇಔಟ್‌ನಲ್ಲಿ ಅಪರಾಧ ಪ್ರಕರಣಗಳು ಕಡಿಮೆ ಆಗಿರುತ್ತದೆ. ಆದರೆ ಚಿಕ್ಕ ಚಿಕ್ಕ ಹುಡುಗರು ಬಟ್ಟೆಗಳನ್ನು ಬಿಚ್ಚಿ ವ್ಹೀಲಿಂಗ್ ಮಾಡುತ್ತಾರೆ ಇದನ್ನು ತಡೆಗಟ್ಟುವಂತೆ ಸಭೆಗೆ ತಿಳಿಸಿದರು.
- ಶ್ರೀ.ಯಾದವ್‌ರವರು ಮಾತನಾಡಿ, ಕೋಡಿಹಳ್ಳಿ ನಿವಾಸಿಗಳಿಗೆ ಗಾಲ್ಫ್ ರಸ್ತೆಯಿಂದ ಮಣಿಪಾಲ್ ಆಸ್ಪತ್ರೆ ಕಡೆಗೆ ಹೋಗಬೇಕಾದರೆ ಸುಮಾರು 1 ಕಿ.ಮೀ ದೂರದಲ್ಲಿರುವ ದೊಮ್ಮಲೂರು ಜಂಕ್ಷನ್‌ಗೆ ಹೋಗಿ ತಿರುವು ಪಡೆದು ಬರಬೇಕಾಗಿರುತ್ತದೆ ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುತ್ತದೆ. ಆದ್ದರಿಂದ ಗಾಲ್ಫ್ ರಸ್ತೆಯ ಎದುರು

ಹಾಕಿರುವ ಬ್ಯಾರಿಕೇಡಿಂಗ್ ಅನ್ನು ತೆರವುಗೊಳಿಸುವಂತೆ ಸಂಚಾರಿ ಪೊಲೀಸ್‌ರವರಿಗೆ ಮನವಿಯನ್ನು ಸಲ್ಲಿಸಿದರು. ಸಂಚಾರಿ ಪೊಲೀಸ್‌ರವರು ಇದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

- ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿರುವ ಬೋರ್‌ವೆಲ್ ಹಾಗೂ ಸಿಸಿ ಕ್ಯಾಮೆರಾಗಳ ನಿರ್ವಹಣೆಯನ್ನು ಆಯಾ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರೇ ಮಾಡಿಕೊಳ್ಳುವಂತೆ ಸಭೆಯಲ್ಲಿ ತಿಳಿಸಿದಾಗ ಇದಕ್ಕೆ ಎಲ್ಲಾ ಸದಸ್ಯರುಗಳು ಒಪ್ಪಿರುತ್ತಾರೆ.
- ಶ್ರೀ.ಅರವಿಂದ್ ಮತ್ತು ಶ್ರೀಮತಿ.ಪೂರ್ಣಿಮಾ ಶೆಟ್ಟಿರವರು ಮಾತನಾಡಿ, ಎಬಿಸಿ(Arial bunched cable) ಕೇಬಲ್ ಅಳವಡಿಸುವಂತೆ ತಿಳಿಸಿರುತ್ತಾರೆ. ಇದಕ್ಕೆ ಸಂಬಂಧಪಟ್ಟ ಬೆಸ್ಕಾಂ ಎಇಇರವರ ಗಮನಕ್ಕೆ ತರುವಂತೆ ಸಹಾಯಕ ಅಭಿಯಂತರರವರು ತಿಳಿಸಿದರು. ಶ್ರೀ.ಯಾದವ್‌ರವರು ಮಾತನಾಡಿ ಕೋಡಿಹಳ್ಳಿ ಹತ್ತಿರ, ಅಲ್ಲಿ ಗರಿಗಳು ಕೇಬಲ್‌ಗಳ ಮೇಲೆ ಬಿದ್ದು ಶಾರ್ಟ್ ಸರ್ಕ್ಯೂಟ್ ಆಗಾಗ್ಗೆ ಆಗುತ್ತಲಿರುತ್ತದೆ ಎಂದು ತಿಳಿಸಿದರು. ಅದಕ್ಕೆ ಪರಿಶೀಲಿಸಿ ಕ್ರಮವಹಿಸುವುದಾಗಿ ಸಂಬಂಧಪಟ್ಟ ಬೆಸ್ಕಾಂ ಅಧಿಕಾರಿಗಳು ತಿಳಿಸಿದರು.
- ಶ್ರೀ.ನಾರಾಯಣ್‌ರವರು ಮಾತನಾಡಿ ಯಲ್ಲಮ್ಮ ದೇವಸ್ಥಾನದ ಹತ್ತಿರ, ಬಿಡಬ್ಲ್ಯೂಎಸ್‌ಎಸ್‌ಬಿಯ ಕುಡಿಯುವ ನೀರಿನ ಪೈಪ್‌ಗೆ ಕಂಟ್ರೋಲ್ ವಾಲ್ವ್ ಹಾಕಲು ತಿಳಿಸಿರುತ್ತಾರೆ. ಇದಕ್ಕೆ ಸಂಬಂಧಪಟ್ಟ ಬಿಡಬ್ಲೂಎಸ್‌ಎಸ್‌ಬಿ ಅಧಿಕಾರಿಗಳು ಕ್ರಮವಹಿಸುವುದಾಗಿ ತಿಳಿಸಿದರು.
- ಸಭೆಯಲ್ಲಿ ಸದಸ್ಯರುಗಳು ಮರಗಳನ್ನು ಕತ್ತರಿಸುವ ಬಗ್ಗೆ ಮಾತನಾಡಿ, ವಾರ್ಡಿನಲ್ಲಿ ತುಂಬಾ ಕಡೆಗಳಲ್ಲಿ ಮರಗಳು ಬೀಳವು ಸಾಧ್ಯತೆ ಇರುವುದರಿಂದ ಇದನ್ನು ತೆರವುಗೊಳಿಸಲು ಕೂಡಲೇ ಕ್ರಮವಹಿಸುವಂತೆ ಸಭೆಗೆ ತಿಳಿಸಿದರು. ಇದಕ್ಕೆ ಅರಣ್ಯ ಇಲಾಖೆಯವರಾದ ಶ್ರೀ.ದೇವರಾಜ್‌ರವರು ಮಾತನಾಡಿ, ಇದಕ್ಕೆ ಮೊದಲು ಮನವಿಯನ್ನು ಸಲ್ಲಿಸಬೇಕು ನಂತರ ನಿಯಮಾನುಸಾರ ಕ್ರಮ ಕೈಗೊಳ್ಳುತ್ತೇವೆ ಎಂದು ತಿಳಿಸಿದರು.
- ಶ್ರೀ.ಜಯಕುಮಾರ್‌ರವರು ಮಾತನಾಡಿ, ಬಿಡಿಎ ಲೇಔಟ್‌ನಲ್ಲಿ ಬೆಸ್ಕಾಂ ತಂತಿ ಕಂಬಗಳನ್ನು ಅಳವಡಿಸಬೇಕು ಎಂದು ತಿಳಿಸಿದರು. ಇದಕ್ಕೆ ಬೆಸ್ಕಾಂರವರು ನೀವು ಮನವಿ ಪತ್ರವನ್ನು ಕೊಡಿ ಅಲ್ಲಿ ಅಗತ್ಯವಿದಯೇ ಎಂಬ ಬಗ್ಗೆ ಸ್ಥಳ ಪರಿಶೀಲಿಸಿ ನಂತರ ಕ್ರಮವಹಿಸುವುದಾಗಿ ತಿಳಿಸಿದರು.
- ಸಭೆಯಲ್ಲಿ ಸದಸ್ಯರುಗಳು ಮಾತನಾಡಿ, ವಾರ್ಡಿನ ಎಲ್ಲಾ ರಸ್ತೆಗಳಲ್ಲಿ ರಸ್ತೆಗುಂಡಿಗಳನ್ನು ಮುಚ್ಚಲು ಅವಶ್ಯ ಕ್ರಮ ಕೈಗೊಳ್ಳುವಂತೆ ಸಭೆಗೆ ತಿಳಿಸಿದರು. ಅದಕ್ಕೆ ಸಹಾಯಕ ಅಭಿಯಂತರರವರು ಉತ್ತರಿಸಿ ಈಗಾಗಲೇ ಹಲವು ಕಡೆಗಳಲ್ಲಿ ರಸ್ತೆಗುಂಡಿಗಳನ್ನು ಮುಚ್ಚಲಾಗಿರುತ್ತದೆ ಹಾಗೂ ಉಳಿದ ರಸ್ತೆಗುಂಡಿಗಳನ್ನು ಮುಚ್ಚಲು ಆದ್ಯತೆಯ ಮೇರೆಗೆ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು.

ಮೇಲ್ಕಂಡಂತೆ ತಿಳಿಸಲಾಗಿರುವ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕ್ರಮವಹಿಸಲು ಮತ್ತೊಮ್ಮೆ ಸೂಚಿಸುತ್ತಾ, ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ವಾರ್ಡ್ ಸಮಿತಿ–113

07/11/2020
ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ 113
ಹಾಗೂ ನೋಡಲ್ ಅಧಿಕಾರಿಗಳು,
ವಾರ್ಡ್ 113